# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 121(63) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ತಳವಾರ ಸಾಬಣ್ಣ<br>(ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | : | 15.07.2024 |
| ಉತ್ತರಿಸಬೇಕಾಗಿರುವ ಸಚಿವರು | : | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಲಬುರಗಿ ಜಿಲ್ಲೆಯ ಹೊಸ ತಾಲ್ಲೂಕುಗಳಿಗೆ ಸ್ವತಂತ್ರ ತಾಲ್ಲೂಕು ವೈದ್ಯಾಧಿಕಾರಿಗಳನ್ನು ನೇಮಿಸಲಾಗಿದೆಯೇ; (ತಾಲ್ಲೂಕುವಾರು ವಿವರ ನೀಡುವುದು) | ತಾಲ್ಲೂಕು ವೈದ್ಯಾಧಿಕಾರಿಗಳ ಕಛೇರಿ ಸ್ಥಾಪಿಸಲು ಹಾಗೂ ಸ್ವತಂತ್ರ ತಾಲ್ಲೂಕು ವೈದ್ಯಾಧಿಕಾರಿಗಳನ್ನು ನೇಮಿಸಲು ಕಡತ ಪರಿಶೀಲನೆಯಲ್ಲಿರುತ್ತದೆ. |
| ಆ | ಕಲಬುರಗಿ ಜಿಲ್ಲೆಯ ಶಹಾಬಾದ ತಾಲ್ಲೂಕಿನಲ್ಲಿ ತಾಲ್ಲೂಕು ವೈದ್ಯಾಧಿಕಾರಿಯ ನೇಮಕ ಮತ್ತು ಕಛೇರಿ ಪ್ರಾರಂಭಿಸಲು ವಿಳಂಬವಾಗಿರುವುದಕ್ಕೆ ಕಾರಣಗಳೇನು; | |
| ಇ | ನೂತನ ಶಹಬಾದ ತಾಲ್ಲೂಕಿನಲ್ಲಿ ಈಗಾಗಲೇ ನಿರ್ಮಿಸಿರುವ ಸುಸಜ್ಜಿತ ಕಾರ್ಮಿಕರ ರಾಜ್ಯ ವಿಮಾ ನಿಗಮದ (ಇ.ಎಸ್.ಐ) ಆಸ್ಪತ್ರೆಯನ್ನು ತಾಲ್ಲೂಕು ಆಸ್ಪತ್ರೆಯನ್ನಾಗಿಸಲು/ಪರಿವರ್ತಿಸಲು ಸರ್ಕಾರದ ನಿಲುವೇನು: | ಕಾರ್ಮಿಕ ಇಲಾಖೆ ಒದಗಿಸಿರುವ ಮಾಹಿತಿಯನ್ವಯ 109 ನೇ ಇ.ಎಸ್.ಐ. ಪ್ರಾದೇಶಿಕ ಮಂಡಳಿಯಲ್ಲಿ ತೀರ್ಮಾನಿಸಿರುವಂತೆ ಕಾರಾವಿ. ಆಸ್ಪತ್ರೆ, ಶಹಬಾದ್, ಗುಲ್ಬರ್ಗಾ ಆಸ್ಪತ್ರೆಯನ್ನೊ ಕಾರಾವಿ. ನಿಗಮಕ್ಕೆ ಹಸ್ತಾಂತರಿಸಲು ಕಾರಾವಿ. ನಿಗಮ ಹಾಗೂ ಕಾರಾವಿ. ಯೋಜನೆ ವೈದ್ಯಕೀಯ ಸೇವೆ, ಇಲಾಖೆಯ ಅಧಿಕಾರಿಗಳು ದಿನಾಂಕ:08.01.2024 ರಂದು ಸ್ಥಳ ವೀಕ್ಷಣೆ ಮಾಡಿ ವರದಿಯನ್ನು ಸಲ್ಲಿಸಿರುತ್ತಾರೆ. ಸದರಿ ವರದಿಯಂತೆ ಆಸ್ಪತ್ರೆಯಲ್ಲಿನ ಕೆಲವು ಬಾಕಿ ಇರುವ ಕಾಮಗಾರಿಗಳು ಹಾಗೂ ಇತರೆ ಕಾಮಗಾರಿಗಳು ಪೂರೈಸಿದ ನಂತರ ಕಾರಾವಿ. ನಿಗಮದ ಮಾರ್ಗಸೂಚಿಯಂತೆ 50 ಹಾಸಿಗೆ ಸಾಮರ್ಥ್ಯದ ಆಸ್ಪತ್ರೆಯನ್ನು ಕರಾವಿ, ನಿಗಮದ ಸಹಮತಿಯೊಂದಿಗೆ ಪ್ರಾರಂಭಿಸಬಹುದಾಗಿದೆ ಎಂದು ಶಿಫಾರಸ್ಸು ಮಾಡಿರುತ್ತಾರೆ . |
| ಈ | ಹೊಸ ಕಟ್ಟಡ ಹಾಗೂ ಎಲ್ಲಾ ಉಪಕರಣಗಳನ್ನು ಹೊಂದಿರುವ ಇ.ಎಸ್.ಐ. ಆಸ್ಪತ್ರೆ ಹಲವಾರು ವರ್ಷಗಳಿಂದ ಸಮರ್ಪಕವಾಗಿ ಕಾರ್ಯನಿರ್ವಹಿಸದಿರುವುದಕ್ಕೆ ಕಾರಣಗಳೇನು; ಸದರಿ ಆಸ್ಪತ್ರೆಯನ್ನು ಸರ್ಕಾರ ತಾಲ್ಲೂಕು ಆಸ್ಪತ್ರೆಯನ್ನಾಗಿಸಿದರೆ ಜನರಿಗೆ ಅನುಕೂಲವಾಗುವುದಿಲ್ಲವೆ? (ವಿವರಿಸುವುದು) | |

**ಆಕುಕ 34 ಎಚ್ಎಸ್ಡಿ 2024**

**(ದಿನೇಶ್ ಗುಂಡೂರಾವ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು